

**ಜ್ಯೋತಿ ಗುರುಪ್ರಸಾದ**

ಕಲೆ: ಜಬೀವುಲ್ಲಾ ಎಂ. ಅಸದ್



# ಮತ್ತೆ ಕವಿತೆ

ಜೋಳಿಗೆ ಖಾಲಿ
ಎಂಬ ಭಾವದಿ
ಸುಮ್ಮನಿರುವಾಗಲೂ
ಅಕ್ಷಯ ಪಾತ್ರೆಯಲ್ಲಿ
ಅನ್ನದಗುಳೊಂದು ಸಿಕ್ಕಂತೆ
ಶೂನ್ಯ ಲೋಕದಿಂದಲೇ
ಕಿರಣ ಬೆಳಗುತ್ತದಲ್ಲ!
ಈ ಕೌತುಕಕ್ಕೆ ಏನು ಹೇಳುವುದು?!

ಕವಿತೆ
ಕಾರ್ಯಾಗಾರದಲ್ಲಿ ಹುಟ್ಟುವುದಿಲ್ಲ
'ಬರಿ' ಎಂದಾಗಲೂ ಒತ್ತಾಯಕ್ಕೆ
ಹುಟ್ಟುವುದಿಲ್ಲ
ಅವರಿವರು ಬರೆದರೆ ನಾನೂ ಬರೆಯಬೇಕು
ಎಂಬ ಆಹಾಕಾರದಿಂದಲೂ
ಜನ್ಮ ತಳೆಯುವುದಿಲ್ಲ

ಕವಿತೆಯೊಂದು ಏಕಾಂತ
ಮನದ ಮಹಲು ಕುಸಿಯುವ ಮುನ್ನ
ಆ ಇಡೀ ಕಟ್ಟಡಕ್ಕೇ
ತನ್ನ ಬಾಹುಬಲ ಚಾಚಿ
ಇನ್ನು ಒಂದು ಇಟ್ಟಿಗೆಯೂ
ಕಳಚಿಹೋಗದಂತೆ
ಆಸರೆ ಕೊಟ್ಟು
ಬದುಕುವ ಆಸೆ ಚಿಗುರಿಸುತ್ತದೆ
ಅಮ್ಮ–ಅಪ್ಪನಂತೆ,
ಪ್ರೇಮಿಯಂತೆ.



Printed and Published by B.A. Ravi on behalf of **The Printers (Mysore) Private Ltd.** Printed at M/s. Rajhan's Enterprises, No.134, 4th Main Road, Indusrial Town, Rajajinagar, Bangalore - 560 044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560 074. Editor: **K.N. SHANTH KUMAR.**

Editorial Office: 75, M.G. Road, Bengaluru - 560 001, E-mail: editormy@mayura.co.in, Phone: 080-45557333, Editorial: 45557264, Circ: 45557200/220, © All rights reserved. Reproduction in whole or in part without permission is prohibited. RNI No 17129/68